<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಶಹಬಾದ</u>

**CC No: 128/2019**

CW : 7 PW: 4

ಹೆಸರು : ಆನಂದ
ತಂದೆಯ ಹೆಸರು : ಅಶೋಕ
ವಯಸ್ಸು : 33 ವರ್ಷ
ಉದ್ಯೋಗ : ವ್ಯಾಪಾರ
ಸ್ಥಳ : ಕಲಬುರಗಿ

(ದಿನಾಂಕ: **31-03-2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)

<u>ಮುಖ್ಯ ವಿಚಾರಣೆ: ಸ.ಸ.ಅ ರವರಿಂದಃ</u>

ನನಗೆ ನ್ಯಾಯಾಲಯದ ಮುಂದಿರುವ ಆರೋಪಿತರ ಪರಿಚಯ ಇರುತ್ತದೆ. ಚಾಸಾ-1 ನನ್ನ ತಂಗಿ, ಚಾಸಾ-6 ನನ್ನ ಸಂಬಂಧಿಕರು, ಚಾಸಾ-4 ಮತ್ತು 5 ರವರ ಪರಿಚಯಸ್ಥರು. ಸಿಂಚನಾರವರ ಮದುವೆ ಅಣವೀರಭದ್ರೇಶ್ವರ ದೇವಸ್ಥಾನದಲ್ಲಿ ಆರೋಪಿ ನಂ.1 ರವರೊಂದಿಗೆ ಮದುವೆ ಆಗಿರುತ್ತದೆ. ಚಾಸಾ-6 ರವರು ನನಗೆ ಫೋನ್ ಮಾಡಿ ಆರೋಪಿತರು ಚಾಸಾ-1 ರವರೊಂದಿಗೆ ಜಗಳ ಮಾಡುತ್ತಿದ್ದಾರೆ ಅಂತ ತಿಳಿಸಿರುತ್ತಾರೆ. ನಂತರ ನಾನು ಚಾಸಾ-6 ರವರ ಮನೆಗೆ ಹೋಗಿ ಸದರಿ ವಿಷಯವನ್ನು ಕೇಳಿ ತಿಳಿದುಕೊಂಡಿರುತ್ತೇನೆ. ಚಾಸಾ-4 ರಿಂದ 6 ರವರು ಮರತೂರಿನಲ್ಲಿ ಹಿರಿಯರ ಸಮಕ್ಷಮ ಪಂಚಾಯತಿ ಮಾಡಿ ಬಂದಿರುತ್ತಾರೆ. ಅವರು ಚೆನ್ನಾಗಿ ಇಟ್ಟುಕೊಳ್ಳುತ್ತೇನೆ ಅಂತ ಹೇಳಿದಾಗ ಚಾಸಾ-1 ರವರನ್ನು ಮತ್ತೆ ಬಿಟ್ಟು ಬಂದಿರುತ್ತಾರೆ. ನಂತರ ಹೀಗೆ ಜಗಳ ಆಗುತ್ತಿದ್ದರಿಂದ ಚಾಸಾ-1 ರವರು ತನ್ನ ತವರು ಮನೆಗೆ ಬಂದಿರುತ್ತಾಳೆ. ನಂತರ ಆರೋಪಿ ನಂ.1 ರವರದು ಎರಡನೇ ಮದುವೆ ಆಗಿರುತ್ತದೆ ಅಂತ ಚಾಸಾ-1 ರವರಿಗೆ ಗೊತ್ತಾಗಿರುತ್ತದೆ. ಅದನ್ನು ಕೇಳಲು ನಾವೆಲ್ಲರೂ ಹೋಗಿರುತ್ತೇವೆ. ಸದರಿ ದಿನಾಂಕ ನನಗೆ ಈಗ ನೆನಪಿಗೆ ಇಲ್ಲ. ನಂತರ ಚಾಸಾ-1 ರವರು ಫಿರ್ಯಾದಿ ಸಲ್ಲಿಸಿರುತ್ತಾರೆ. ನಾನು ಈ ಕುರಿತು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಇಷ್ಟನ್ನು ಹೊರತುಪಡಿಸಿ ಪ್ರಕರಣದ ಬಗ್ಗೆ ಮಾಹಿತಿ ಇರುವುದಿಲ್ಲ.

(ಈ ಹಂತದಲ್ಲಿ ಸ.ಸ. ಅಭಿಯೋಜಕರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲಾಯಿತು)

<u>ಪಾಟೀ ಸವಾಲು: ಸ.ಸ. ಅಭೀಯೋಜಕರಿಂದ</u>

ಈಗ 8-9 ವರ್ಷಗಳ ಹಿಂದೆ ಸಿಂಚನ ಅವರ ಮದುವೆ ಅಣವೀರಭದ್ರೇಶ್ವರ ದೇವಸ್ಥಾನದಲ್ಲಿ ಆಗಿರುತ್ತದೆ ಅಂದರೆ ಸರಿ. ಆರೋಪಿತರು ಚಾಸಾ-1 ರವರಿಗೆ ಮಾನಸಿಕ ಮತ್ತು ದೈಹಿಕ ಕಿರುಕುಳ ಕೊಟ್ಟು ಹೊಡಿಬಡಿ ಮಾಡಿರುತ್ತಾರೆ ಅಂತ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ಚಾಸಾ-1 ರವರಿಗೆ ಆರೋಪಿ ನಂ.1 ರವರು ಸರಿಯಾಗಿ ನೋಡಿಕೊಳ್ಳದೇ ಇದ್ದರಿಂದ ಕೌಟುಂಬಿಕ

ನ್ಯಾಯಾಲಯ ಕಲಬುರಗಿಯಲ್ಲಿ ದಾವೆ ಹೂಡಿರುತ್ತಾರೆ ಎಂದರೆ ಸರಿ. ನ್ಯಾಯಾಧೀಶರ ಮುಂದೆ ಆರೋಪಿ ನಂ.1 ಇತನು ಚಾಸಾ-1 ರವರಿಗೆ ಚೆನ್ನಾಗಿ ನೋಡಿಕೊಳ್ಳುತ್ತೇನೆ ಅಂತ ಕರೆದುಕೊಂಡು ಹೋಗಿರುತ್ತಾನೆ ಎಂದರೆ ಸರಿ. ಮರತೂರು ಗ್ರಾಮದಲ್ಲಿ ಆರೋಪಿತರು ಎಲ್ಲರೂ ಕೂಡಿ ಮಾನಸಿಕ ದೈಹಿಕ ಕಿರುಕುಳ ನೀಡಿದ್ದರಿಂದ ಚಾಸಾ-1 ರವರು ಬೇಸತ್ತು ತವರು ಮನೆಗೆ ಬಂದಿರುತ್ತಾರೆ ಎಂದರೆ ಸರಿ. ಆರೋಪಿ ನಂ.1 ಇತನು ಚಾಸಾ-1 ರವರು ತವರು ಮನೆಯಲ್ಲಿ ಇದ್ದಿದ್ದರಿಂದ ಎರಡನೇ ಮದುವೆಯಾದ ವಿಷಯ ಚಾಸಾ-1 ಇವಳಿಗೆ ತಿಳಿಸಿದ್ದರಿಂದ ಅವಳು ದಿ: 26/01/2019 ರಂದು ಬೆಳಿಗ್ಗೆ 11 ಗಂಟೆಗೆ ಚಾಸಾ-6 ರವರೊಂದಿಗೆ ಮರತೂರು ಗ್ರಾಮಕ್ಕೆ ಹೋಗಿ ಆರೋಪಿ ನಂ.1 ಇವರಿಗೆ ಎರಡನೇ ಮದುವೆ ಆಗಿರುವ ಬಗ್ಗೆ ವಿಚಾರಿಸಿದಾಗ ಆತನು ಅವಾಚ್ಯ ಶಬ್ಧಗಳಿಂದ ಬೈದಿರುತ್ತಾನೆ ಎಂದರೆ ಸರಿ.

ಪಾಟೀ ಸವಾಲು: ಶ್ರೀ ಬಿ.ಎಸ್.ಎಮ್. ಆರೋಪಿ ಪರ ವಕೀಲರಿಂದಃ

ನಾನು ಗುಲಬರ್ಗದಲ್ಲಿ ಕೆಲಸ ಮಾಡುತ್ತೇನೆ. ಕಲಬುರಗಿಯಿಂದ ಮಿಣಜಿಗಿ ಎಷ್ಟು ಕಿ.ಮೀ ಅಂತರ ಇರುತ್ತದೆ ಅಂತ ನನಗೆ ಗೊತ್ತಿರುವುದಿಲ್ಲ. ನಾನು ಹೋಟೆಲ ವ್ಯಾಪಾರ ಮಾಡುತ್ತೇನೆ. ಚಾಸಾ-1 ರವರು ಹೇಗೆ ತಂಗಿ ಎಂದರೆ ಸಾಕ್ಷಿಯು 17 ವರ್ಷಗಳಿಂದ ಚಾಸಾ-1 ರವರ ಅಕ್ಕ ಗುರುಬಾಯಿ ಯವರು ನಮ್ಮ ಮನೆಯ ಪಕ್ಕದಲ್ಲಿರುವ ಕಾರಣ ಅವಳನ್ನು ತಂಗಿ ಅಂತ ತಿಳಿದುಕೊಂಡಿರುವುದಾಗಿ ಹೇಳುತ್ತಾರೆ. ಅದೇ ರೀತಿ ಚಾಸಾ-6 ರವರೂ ಸಹ ತಂಗಿ ಸಮಾನರು. ಚಾಸಾ-1 ರವರ ಹಾಗೂ ಆರೋಪಿತರ ನಡುವೆ ಏನು ಆಗಿರುತ್ತದೆ ಅಂತ ನಿಮಗೆ ವೈಯುಕ್ತಿಕವಾಗಿ ಗೊತ್ತಿರುವುದಿಲ್ಲ ಎಂದರೆ ಸಾಕ್ಷಿಯು ಫೋನ್ ಮುಖಾಂತರ ಕೇಳಿ ತಿಳಿದುಕೊಂಡಿರುವುದಾಗಿ ಹೇಳುತ್ತಾರೆ. ನನ್ನ ಸಮಕ್ಷಮ ಯಾವುದೇ ಘಟನೆ ಆಗಿರುವುದಿಲ್ಲ, ಅದನ್ನು ಕೇಳಿ ಗೊತ್ತಾಗಿರುತ್ತದೆ ಎಂದರೆ ಸರಿ. ಚಾಸಾ-1 ಮತ್ತು 6 ರವರು ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಹಾಗೂ ಪ್ರಕರಣಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-4 ರಿಂದ 6 ರವರು ಪಂಚಾಯತಿ ಮಾಡಿರುವುದಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನಂ.1 ರವರು ಎರಡನೇ ಮದುವೆ ಮಾಡಿಕೊಂಡಿರುತ್ತಾನೆ ಅಂತ ಕೇಳಿ ಗೊತ್ತಾಗಿರುತ್ತದೆ ಅಂತ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನಂ.1 ರವರು ಚಾಸಾ-1 ರವರಿಗೆ ಅವಾಚ್ಯ ಶಬ್ಧಗಳಿಂದ ಬೈದು ಹೊಡಿಬಡಿ ಮಾಡಿರುತ್ತಾನೆ ಅಂತ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಚಾಸಾ-1 ರವರಿಗೆ ಮಾನಸಿಕ ಹಾಗೂ ದೈಹಿಕ ಕಿರುಕುಳ ಕೊಟ್ಟಿರುವುದಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ

ಎಂದರೆ ಸರಿಯಲ್ಲ.  ಪ್ರಕರಣದ ಬಗ್ಗೆ ಮಾಹಿತಿ ಇಲ್ಲದೇ ಇದ್ದರೂ ಸಹ ಚಾಸಾ-1 ಮತ್ತು 6 ರವರ ಮಾತು ಕೇಳಿ ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ. ಸರಿ ಇದೆ.

**Sd/-**

ಸಿವಿಲ್ ನ್ಯಾಯಾಧೀಶರು, ಶಹಬಾದ.